# ಬೇಕಾಗಿದೆ ಭಾರತಕ್ಕೆ ಅಧ್ಯಕ್ಷೀಯ ಪ್ರಜಾಪ್ರಭುತ್ವ

## (ಒನ್ ಇಂಡಿಯಾ ಒನ್ ಪೀಪಲ್ ಪತ್ರಿಕೆಯ ಜೂನ್ 2011ರ ಸಂಚಿಕೆಯಲ್ಲಿ ಪ್ರಕಟವಾದ ಎಸ್ ಪ್ರೆಸಿಡೆಂಟ್ ಲೇಖನದ ಸ್ವಲ್ಪ ಮಾರ್ಪಾಟಾದ ರೂಪ)

## ಅಧ್ಯಕ್ಷೀಯ ಪ್ರಜಾಪ್ರಭುತ್ವ

ನಮ್ಮ ಸಂವಿಧಾನದ ಕರ್ತೃಗಳು, ಅಂತಹ ದಾಖಲೆಗಳಲ್ಲಿ ವಿಶ್ವದಲ್ಲೇ ಅತಿ ದೊಡ್ಡದು ಎಂದೆನಿಸುವ, ನಮ್ಮ ಸಂವಿಧಾನದ ಕರಡನ್ನು ತಯಾರಿಸುವುದಕ್ಕೆ ದೀರ್ಘಕಾಲ ತೆಗೆದುಕೊಂಡರು. ಅದು ಜನತೆಯ ಮೂಲಭೂತ ಹಕ್ಕುಗಳನ್ನು ಯಶಸ್ವಿಯಾಗಿ ಸಂರಕ್ಷಿಸಿತು. ಆದರೆ ಸರ್ಕಾರದ ಸ್ವರೂಪವನ್ನು ನಿರ್ಧರಿಸುವಾಗ ಅದು ಹಲವು ಬದಲಾವಣೆಗಳೊಂದಿಗೆ ಬ್ರಿಟನ್ನಿನ ಮಾದರಿಯನ್ನು ಅನುಸರಿಸಿತು. ನಮ್ಮ ರಾಷ್ಟ್ರಪತಿ ಬ್ರಿಟಿಷ್ ರಾಜ/ರಾಣಿಯರಂತೆ ಸಾಂಕೇತಿಕ, ಅಲಂಕಾರಿಕವಾದ ಪ್ರಭುತ್ವದ ಸಂಕೇತವಾಗಿ ಉಳಿದು ಬಿಟ್ಟರು.


ನಾವು ಏಕೆ ಈ ಮಾದರಿಯನ್ನು ಆರಿಸಿಕೊಂಡೆವು. ಇದಕ್ಕೆ ಇದ್ದ ಕಾರಣವೆಂದರೆ ನಮಗೆ ಬ್ರಿಟನ್ನಿನ ವಿಧಾನದಲ್ಲಿದ್ದ ಗೌರವ ಮತ್ತು ಅದನ್ನು ಬಳಸಿಕೊಳ್ಳುವುದರಲ್ಲಿ ನಮಗಿದ್ದ ಸೌಲಭ್ಯ. ನ್ಯಾಯಶಾಸ್ತ್ರ ಪಾರಂಗತರಾಗಿದ್ದ ಶ್ರೀ ಎಂ.ಸಿ ಚಾಗ್ಲಾ ಅವರ ಮಾತುಗಳಲ್ಲಿ ಹೇಳುವುದಾದರೆ ಬ್ರಿಟಿಷ್ ಮಾದರಿಯ ಪಾರ್ಲಿಮೆಂಟರಿ ಪ್ರಜಾಪ್ರಭುತ್ವದ ಕಡೆ ನಾವು ಒಲವು ತೋರಿಸಿದ್ದಕ್ಕೆ ಕಾರಣಗಳಲ್ಲಿ ಮುಖ್ಯವಾದವು 1. ಸ್ವಾತಂತ್ರ್ಯಕ್ಕೆ ಮುಂಚೆ ನಾವು ಕೇಂದ್ರದಲ್ಲಿ ಮತ್ತು ರಾಜ್ಯಗಳಲ್ಲಿ ನಮ್ಮ ಶಾಸನ ಸಭೆಗಳನ್ನು ಸ್ವಲ್ಪ ಹೆಚ್ಚು ಕಡಿಮೆ ಬ್ರಿಟನ್ನಿನ ಮಾದರಿಯಲ್ಲೇ ನಡೆಸುತ್ತಿದ್ದೆವು. ಆದರಿಂದ ನಮಗೆ ಆ ವಿಧಾನದ ಅಭ್ಯಾಸಗಳು, ಸಂಪ್ರದಾಯಗಳು, ರೀತಿ ನೀತಿಗಳು ಕರಗತವಾಗಿದ್ದವು ಮತ್ತು 2. ರಾಷ್ಟ್ರದ ಅತ್ಯುನ್ನತ ಸ್ಥಾನದಲ್ಲಿ, ಆಡಳಿತದ ಮುಖ್ಯಸ್ಥರಾಗಿ ರಾಷ್ಟ್ರಪತಿ ಇದ್ದರೆ, ನಮಗೆ ನಮ್ಮನ್ನು ಹಿಂದೆ ಆಳಿದ ರಾಜರು, ಚಕ್ರವರ್ತಿಗಳು ನೆನಪಿಗೆ ಬರುತ್ತಿದ್ದರು.



ಶತೃಗಳು ಚಿರಕಾಲ ಬಾಳಲಿ

ಆಡಳಿತದ ಮಟ್ಟ ದಿನದಿನಕ್ಕೆ ಇಳಿಯುತ್ತಲೇ ಇರುವುದನ್ನು ಮತ್ತು ಲಂಚ, ಖುಷುವತ್ತುಗಳ ಮಟ್ಟ ಏರುತ್ತಾ ಏರುತ್ತಾ ದಿನ ದಿನಕ್ಕೆ ಹೊಸ ಹೊಸ ಶಿಖರಗಳನ್ನು ಸೃಷ್ಟಿಸುತ್ತಾ, ಹೋಗುತ್ತಿರುವುದನ್ನು ನೋಡುತ್ತಿರುವಾಗ, ನಮ್ಮ ವ್ಯವಸ್ಥೆ ನಡೆದು ಹೋಗುತ್ತಿರುವ ರೀತಿ ಸರಿಯಾಗಿದೆಯೇ ಇಲ್ಲವೇ ಎಂಬುದನ್ನು ಪರೀಕ್ಷಿಸುವ ಕಾಲ ಬಂದಿದೆ. ಆ ಪರೀಕ್ಷೆಯನ್ನು ನಾವು ಬಿಚ್ಚು ಮನಸ್ಸಿನಿಂದ ಮಾಡಬೇಕಾಗಿದೆ. ಅದರ ಜೊತೆಗೆ ಅಮೇರಿಕಾ, ಫ್ರಾನ್ಸ್ , ಜರ್ಮನಿ ಮುಂತಾದ ಇತರ ದೇಶಗಳಲ್ಲಿ ಅಲ್ಲಿನ ವ್ಯವಸ್ಥೆಗಳು ನಡೆಯುತ್ತಿರುವ ರೀತಿಯ ಜೊತೆ ತೂಗಿ ನೋಡಬೇಕಾದ ಸಮಯ ಬಂದಿದೆ.

ನಾವು, ಅದು ನಮಗೆ ಬಳಕೆಯಾಗಿರುವ ಪದ್ಧತಿ ಎಂಬುದರ ಆಧಾರದ ಮೇಲೆ ಒತ್ತು ಕೊಟ್ಟು, ಬ್ರಿಟಿಷ್ ಪದ್ಧತಿಯನ್ನು ಆರಿಸಿಕೊಂಡೆವಾದರೂ ಅಮೆರಿಕಾದ ಸಂವಿಧಾನದ ಕರ್ತೃಗಳು, ಅವರಲ್ಲಿ ಹೆಚ್ಚಿನವರು ಬ್ರಿಟಿಷ್ ಮೂಲದವರೇ ಆಗಿದ್ದರೂ, ಭಿನ್ನವಾದ ರೀತಿಯನ್ನು ಆರಿಸಿಕೊಂಡಿದ್ದೇಕೆ ಎಂಬ ಪ್ರಶ್ನೆ ತುಂಬಾ ಸಂಗತವಾದ ಪ್ರಶ್ನೆಯಾಗಿದೆ. ಅಮೆರಿಕಾದ ಸಂವಿಧಾನವನ್ನು ರಚಿಸುವುದಕ್ಕೆ ಮುಂಚೆ, ನಡೆದ ಈ ಸಂಬಂಧದ ಚರ್ಚೆಗಳು, ವಾದ ವಿವಾದಗಳು, ಪ್ರಕಟವಾದ ಪ್ರಮುಖ ವಿಚಾರಗಳನ್ನು ವಿಮರ್ಶೆಗಳನ್ನು ನಮ್ಮ ಸಂವಿಧಾನದ ಕರ್ತೃಗಳು ಗಣನೆಗೆ ತೆಗೆದುಕೊಂಡಂತಿಲ್ಲ. ಕಳೆದ 60 ವರ್ಷಗಳಿಂದ ನಮ್ಮ ವ್ಯವಸ್ಥೆ ನಡೆದು ಬಂದ ರೀತಿಯನ್ನು ಗಮನಿಸುವವರು ಆ ವಿಚಾರಗಳನ್ನು ತೀವ್ರವಾಗಿ ಗಮನಕ್ಕೆ ತಂದುಕೊಳ್ಳಬೇಕಾದದ್ದು ಆವಶ್ಯಕವಾಗಿದೆ.





ಇದೊಂದು ದೊಡ್ಡ ತಲೆ ನೋವಾಗಿ ಬಿಟ್ಟಿದೆ. ಹಲವು ತಿಂಗಳುಗಳಾದರೂ ಸರ್ಕಾರವನ್ನು ಉರುಳಿಸಲು ಸಾಧ್ಯವಾಗದಂತಹ ನಿಯಮ ಅವಶ್ಯಕವಾಗಿದೆ

ಅಮೆರಿಕಾದ ಸಂವಿಧಾನ ಕರ್ತೃಗಳು ಬ್ರಿಟಿಷ್ ಮಾದರಿಯನ್ನು ಪರಿಶೀಲಿಸಿದಾಗ ಅವರಿಗೆ ಒಂದು ಭಯ ಮನಸ್ಸಿನಲ್ಲಿ ಒಳಗೇ ಕಾಡುತ್ತಿತ್ತು. ಮೊದ ಮೊದಲು ಅಮೆರಿಕಕ್ಕೆ ವಲಸೆ ಬಂದವರಲ್ಲಿ ಬಹುಪಾಲು ಜನ ಬ್ರಿಟಿಷ್ ಮೂಲದವರೇ ಆಗಿದ್ದರೂ, ಮುಂದೆ ಕಾಲಾನುಕ್ರಮದಲ್ಲಿ ವಲಸೆ ಬಂದವರ ದೇಶವಾಗುವ ತಮ್ಮ ದೇಶ, ಯೂರೋಪಿನ ವಿವಿಧ ಭಾಗಗಳಾದ ಫ್ರಾನ್ಸ್, ಜರ್ಮನಿ, ಸ್ಪೇನ್, ಇಟಲಿ, ಪೋರ್ಚುಗಲ್ ಮುಂತಾದ ದೇಶಗಳಿಂದ ವಲಸೆ ಬರುವವರನ್ನು ಆಕರ್ಷಿಸುವುದು ಖಂಡಿತ. ಭಾಷೆಯನ್ನು ಸೇರಿದಂತೆ ಈ ವಲಸಿಗರಲ್ಲಿ ತುಂಬಾ ಪ್ರಬಲವಾದ ರಾಷ್ಟ್ರೀಯ ಪ್ರಜ್ಞೆಗಳು ಬಲವಾಗಿರುವುದರಿಂದ ಈ ವಲಸಿಗರ ಗುಂಪುಗಳು ಮುಂದೆ ತಮ್ಮ ತಮ್ಮದೇ ಆದ ಸ್ವತಂತ್ರ ರಾಜಕೀಯ ಪಕ್ಷಗಳನ್ನು ಕಟ್ಟಿಕೊಳ್ಳುವ ಸಾಧ್ಯತೆಗಳು ಪ್ರಬಲವಾಗಿರುತ್ತವೆ. ಈ ರಾಜಕೀಯ ಪಕ್ಷಗಳು, ವಲಸೆ ಬಂದ ಗುಂಪುಗಳು ಬಂದ ಭಾಗದ ಪ್ರಜ್ಞೆಯನ್ನು ಬಲವಾಗಿ ಹೊಂದಿರುತ್ತವೆ. ಆದರಿಂದಾಗಿ ದೇಶ ಹೆಚ್ಚಿನ ಸಂಖ್ಯೆಯ ಪಕ್ಷಗಳಿಂದ ತುಂಬಿ ಹೋಗಿ, ಅದರಿಂದ ಬ್ರಿಟನ್ನಿನಂತಹ ಪಾರ್ಲಿಮೆಂಟರಿ ವ್ಯವಸ್ಥೆಯಲ್ಲಿ ಕೇಂದ್ರ ಬಲವಿಲ್ಲದ್ದೂ ಅಸ್ಥಿರವಾದದ್ದೂ ಆಗಿಬಿಡುತ್ತದೆ. ಇಂತಹ ಸಂದರ್ಭವನ್ನು ರಾಜಕೀಯ ಪಕ್ಷಗಳು ತಮ್ಮ ಸ್ವಾರ್ಥದ ಹಿತಾಸಕ್ತಿಗಳಿಗಾಗಿ ಬಳಸಿಕೊಳ್ಳಬಹುದು ಮತ್ತು ಈ ಗುಂಪುಗಳು ಕಾಲಾನುಕ್ರಮದಲ್ಲಿ ತಮ್ಮ ತಮ್ಮದೇ ಸ್ವಾತಂತ್ರ್ಯಕ್ಕೆ ಪ್ರಯತ್ನಿಸಬಹುದು. ಈ ಕಾರಣಗಳಿಂದಾಗಿ ಅವರು ಬ್ರಿಟನ್ನಿನ ಮಾದರಿಗಿಂತ ವಿಭಿನ್ನವಾದ ಮಾದರಿಯನ್ನು, ಸರ್ಕಾರಕ್ಕೆ ಸ್ಥಿರತೆಯನ್ನು ಕೊಡುವ ಮತ್ತು ಸರ್ಕಾರದ ಕಾರ್ಯಕಾರಿ ಮುಖ್ಯಸ್ಥನಿಗೆ ನಿಶ್ಚಿತವಾದ ಆವಧಿಯ ಅಧಿಕಾರವನ್ನು ಕೊಡುವಂತಹ, ಆತನನ್ನು ನೇರವಾಗಿ ಪ್ರಜೆಗಳೇ ಆರಿಸುವಂತಹ ವ್ಯವಸ್ಥೆಯನ್ನು ಆರಿಸಿಕೊಂಡರು.

ಅವರಿಗಿದ್ದ ಈ ಸಂಬಂಧದ ಭೀತಿ ಎಷ್ಟು ವಾಸ್ತವವಾದದ್ದು ಎಂಬುದು, ನಮ್ಮ ಹಿಂದಿನ 60 ವರ್ಷಗಳ ಅನುಭವ ಸಾಬೀತು ಮಾಡಿದೆ. ನಮ್ಮ ದೇಶದಲ್ಲಿ ಮೊದ ಮೊದಲಿಗೆ ಕೇಂದ್ರ ಮತ್ತು ರಾಜ್ಯಗಳೆರಡರಲ್ಲೂ ಹೆಚ್ಚು ಕಡಿಮೆ ಒಂದೇ ಪಕ್ಷದ್ದೇ ಆಡಳಿತವಿತ್ತು. ಈಗ ನಾವು ಪಕ್ಷಗಳ ಸ್ಫೋಟವನ್ನೇ ಕಾಣುತ್ತಿದ್ದೇವೆ. ಪ್ರಾದೇಶಿಕ ಆಧಾರದ, ಭಾಷಾ ಆಧಾರದ  ಜಾತಿ ಆಧಾರದ ರಾಜಕೀಯ ಪಕ್ಷಗಳು ಅನೇಕ ರಾಜ್ಯಗಳಲ್ಲಿ ವಿಪರೀತವಾಗಿ ಹುಟ್ಟಿಕೊಂಡಿವೆ. ಉದಾಹರಣೆಯಾಗಿ ಮಹಾರಾಷ್ಟ್ರದಲ್ಲಿನ ಶಿವಸೇನೆ, ಆಂಧ್ರಪ್ರದೇಶದ ತೆಲುಗು ದೇಶಂ, ತಮಿಳುನಾಡಿನಲ್ಲಿ ಎರಡು (ಈಗ ಮೂರು) ದ್ರಾಮುಕ ಪಕ್ಷಗಳು, ಜಾರ್ಖಂಡ್ ರಾಜ್ಯದ ಜಾರ್ಖಂಡ್ ಮುಕ್ತಿಮೋರ್ಚಾ, ಪಂಜಾಬಿನಲ್ಲಿ ಅಕಾಲಿದಳ,  ಕಾಶ್ಮೀರದಲ್ಲಿ ನ್ಯಾಷನಲ್ ಕಾನ್ಫರೆನ್ಸ್ ಮತ್ತು ಪಿ.ಡಿ.ಪಿ.ಪಕ್ಷಗಳು, ಅಸ್ಸಾಮಿನಲ್ಲಿ ಅಸ್ಸಾಂ ಗಣತಂತ್ರ ಪರಿಷತ್ತು, ಒರಿಸ್ಸಾದ ಬಿಜು ಜನತಾದಳ, ಪಶ್ಚಿಮ ಬಂಗಾಳದ ತೃಣಮೂಲ ಕಾಂಗ್ರೆಸ್ ಮಿಜೋರಾಂನ ಮಿಜೋರಾಷ್ಟ್ರೀಯ ರಂಗ, ನಾಗಾಲ್ಯಾಂಡಿನ ನಾಗಾಲ್ಯಾಂಡ್ ಪೀಪಲ್ಸ್‌ಫ್ರಂಟ್, ಮಣಿಪುರದ ಮಣಿಪುರ ಪೀಪಲ್ಸ್ ಪಕ್ಷ, ಗೋವಾದ ಮಹಾರಾಷ್ಟ್ರವಾದೀ ಗೋಮಾಂತಕ ಪಕ್ಷ ಇವುಗಳನ್ನು ಗುರುತಿಸಬಹುದು.  ಇವುಗಳ ಜೊತೆಗೆ ಜಾತ್ಯಾಧಾರಿತ ಪಕ್ಷಗಳು ಬೇರೆ.  ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾ, ಉತ್ತರಪ್ರದೇಶದ ಸಮಾಜವಾದಿ ಪಕ್ಷ ಮತ್ತು ಬಹುಜನ ಸಮಾಜ ವಾದೀ ಪಕ್ಷ, ಬಿಹಾರದ ರಾಷ್ಟ್ರೀಯ ಜನತಾದಳ ಮುಂತಾವುದುಗಳು ಇದಕ್ಕೆ ಉದಾಹರಣೆಗಳು.

ಪಕ್ಷಗಳ ವಿಕಸನದ ಮೇಲೆ ಅಧ್ಯಕ್ಷೀಯ ಪದ್ದತಿಯ ಪ್ರಭಾವ.

ಇದು ವಿಚಿತ್ರವೆನಿಸಬಹುದು. ಆದರೆ ಸತ್ಯ. ಸರ್ಕಾರ ಯಶಸ್ವಿಯಾಗಿ ನಡೆಯುವುದಕ್ಕೆ ಪಕ್ಷಗಳ ಪದ್ದತಿಗೆ ಒತ್ತುಕೊಡದೇ ಇದ್ದರೂ ಅಮೆರಿಕದ ಪ್ರಜಾಪ್ರಭುತ್ವ ಪದ್ದತಿಯಲ್ಲಿ ಆರೋಗ್ಯಕರವಾದ ದ್ವಿಪಕ್ಷೀಯ ವ್ಯವಸ್ಥೆ ಕಾಲಾನುಕ್ರಮದಲ್ಲಿ ವಿಕಸನಗೊಂಡಿದೆ. ಅನೇಕ ರಾಜಕೀಯ ಪರಿಣಿತರು, ಅಮೆರಿಕದ ಪ್ರಜಾಪ್ರಭುತ್ವ ವ್ಯವಸ್ಥೆಯೇ ತನ್ನ ಆಂತರಿಕ ಗುಣ ವಿಶೇಷಗಳಿಂದ, ದ್ವಿಪಕ್ಷೀಯ ರಾಜಕೀಯ ವ್ಯವಸ್ಥೆಗೆ ದಾರಿ ಮಾಡಿಕೊಟ್ಟಿದೆ ಎಂದು ವಾದಿಸುತ್ತಾರೆ. ಅಮೆರಿಕದ ಅಧ್ಯಕ್ಷಸ್ಥಾನದ ಅಭ್ಯರ್ಥಿಗಳಿಗೆ ಜಯಗಳಿಸಲು ಅಮೇರಿಕದ ಮತದಾರರ ಎಲೆಕ್ಟೋರಲ್ ಕಾಲೇಜಿನ ಮತಗಳ ಪೈಕಿ ಬಹುಮತ ಅವಶ್ಯಕ. ಚುನಾವಣೆಗೆ ಮುಂಚೆ ಎರಡು ಪ್ರಬಲಪಕ್ಷಗಳಲ್ಲಿ ಸ್ಪರ್ಧೆ ಇಲ್ಲದಿದ್ದರೆ, ಅವಶ್ಯಕವಾದ ಬಹುಮತ ಪಡೆಯಲು ಸಾಧ್ಯವೇ ಇಲ್ಲ. ಅಮೆರಿಕದ ಅಧ್ಯಕ್ಷ ಸ್ಥಾನಕ್ಕೆ ನಡೆದ ಚುನಾವಣೆಗಳ ರೀತಿಯ ಪರಿಶೀಲನೆ ನಡೆಸಿದಾಗ ತಿಳಿದು ಬರುವ ಅಂಶವೆಂದರೆ, ಆವ್ಯವಸ್ಥೆಯಲ್ಲಿ ಸಣ್ಣ ಸಣ್ಣ ಪಕ್ಷಗಳ ಉದಯಕ್ಕೆ ಯಾವ ಉತ್ತೇಜನವೂ ದೊರೆಯುವುದಿಲ್ಲ. ಇದಕ್ಕೆ ಕಾರಣವೆಂದರೆ, ಅಂತಹಪಕ್ಷಗಳು ಅಧ್ಯಕ್ಷ ಸ್ಥಾನದ ಚುನಾವಣೆಯ ಮೇಲೆ ಯಾವ ಗಹನವಾದ ಪರಿಣಾಮವನ್ನೂ ಬೀರಲಾರವು. ಉದಾಹರಣೆಗೆ **1968** ರಲ್ಲಿ ಅಲಬಾಮಾದ ಜನಾಂಗೀಯವಾದೀ ಗವರ್ನರ್. ಜಾರ್ಜ್‌ವ್ಯಾಲೆಸ್ ಅವರು ಅಮೇರಿಕನ್ ಸ್ವತಂತ್ರ್ಯ ಪಕ್ಷವನ್ನು ಕಟ್ಟಿದರು. ಜನ ಮತದಲ್ಲಿ ಶೇಕಡಾ **13.59** ರಷ್ಟನ್ನು ಗಳಿಸಿದರು. ಆದರೂ ಇದು ಅಂತಿಮ ಪರಿಣಾಮದ ಮೇಲೆ ಯಾವ ಗಮನಾರ್ಹ ಪರಿಣಾಮವನ್ನು ಬೀರದೇ ಇದ್ದುದರಿಂದ ಅವರ ಪಕ್ಷ ಶೀಘ್ರವಾಗಿ ಹೇಳ ಹೆಸರಿಲ್ಲದಂತಾಯಿತು. ಅದೇ ರೀತಿ **1980** ರಲ್ಲಿ ಇನ್ನೊಬ್ಬ ಪ್ರಭಾವಶಾಲೀ ವ್ಯಕ್ತಿ ಜಾನ್ ಅಂಡರ್ಸನ್, ತಮ್ಮ ಪಕ್ಷವಾದ ರಿಪಬ್ಲಿಕನ್ ಪಕ್ಷದಿಂದ ಬೇರೆ ಸಿಡಿದು, ಮೂರನೆಯ ಪಕ್ಷದ ಅಭ್ಯರ್ಥಿಯಾಗಿ ಚುನಾವಣೆಗೆ ನಿಂತು ಒಟ್ಟು ಚಲಾಯಿಸಲಾದ ಮತಗಳ ಪೈಕಿ ಶೇಕಡ **6.6** ರಷ್ಟು ಮತಗಳನ್ನು ಗಳಿಸಿದರು. ಆದರೆ ಇದರಿಂದ ಚುನಾವಣೆಯ ಅಂತಿಮ ಪರಿಣಾಮದ ಮೇಲೆ ಏನೂ ಪರಿಣಾಮ ಆಗಲಿಲ್ಲ. ಮುಂದೆ ಬಂದ ಚುನಾವಣೆಯಲ್ಲಿ ಆಂಡರ್ಸನ್ ಮಹಾಶಯನೇ ಡೆಮೋಕ್ರಟಿಕ್ ಪಕ್ಷದ ಅಭ್ಯರ್ಥಿಯ ಉಮೇದುವಾರಿಕೆಯನ್ನು ಬೆಂಬಲಿಸಿದನು.



ನಾನು ನಿನಗಿಂತ ಪ್ರಾಮಾಣಿಕ. ನಿನ್ನ ಮೇಲೆ ಎಂಟು ಲಂಚದ ಅಪಾದನೆಗಳಿವೆ. ನನ್ನ ಮೇಲೆ ಕೇವಲ ಆರು ಆಪಾದನೆಗಳಿವೆ.

ಇದಕ್ಕೆ ತೀರ ವಿರುದ್ಧವಾಗಿ ನಮ್ಮ ವ್ಯವಸ್ಥೆಯಲ್ಲಿ ಸಣ್ಣಪುಟ್ಟ ಪಕ್ಷಗಳ ಹುಟ್ಟಿಗೆ ಮತ್ತು ವಿವಿಧ ಹಿತಾಸಕ್ತಿಗಳಿಗಾಗಿ ಹುಟ್ಟಿಕೊಳ್ಳುವ ಪಕ್ಷಗಳಿಗೆ ಮತ್ತು ಪ್ರಮುಖ ಪಕ್ಷಗಳಿಂದ ಸಿಡಿದು ಬರುವ ಪಕ್ಷಗಳಿಗೆ ಹೆಚ್ಚು ಉತ್ತೇಜನ ದೊರೆಯುತ್ತದೆ. ಇದಕ್ಕೆ ಪ್ರಮುಖ ಕಾರಣವೇನೆಂದರೆ ಸಣ್ಣಪುಟ್ಟ ಪಕ್ಷಗಳು, ವಿವಿಧ ಹಿತಾಸಕ್ತಿಗಳ ರಕ್ಷಣೆಗಾಗಿ ಹುಟ್ಟಿಕೊಂಡ ಪಕ್ಷಗಳು, ಪ್ರಾದೇಶಿಕ ಪಕ್ಷಗಳು, ರಾಜಕೀಯಕ್ಷೇತ್ರದಲ್ಲಿ ತಾವು ಪ್ರಧಾನಪಾತ್ರ ವಹಿಸುವ ಅವಕಾಶಗಳು ಹೇರಳವಾಗಿವೆ, ಮತ್ತು ತಾವು ಹೀಗೆಯೇ ಆಗಬೇಕು ಎಂದು ಹೇಳಿ ಮಾಡಿಸಿ ಯಶಸ್ವಿಯಾಗುವ ಅವಕಾಶಗಳು ಹೇರಳವಾಗಿವೆ, ಎಂಬುದನ್ನು ಕಂಡುಕೊಂಡಿವೆ. ಇದು ಕೇಂದ್ರ ಮಟ್ಟದಲ್ಲೂ ಮತ್ತು ರಾಜ್ಯಗಳ ಮಟ್ಟದಲ್ಲೂ ಸಾಧ್ಯವಾಗಿವೆ. ಅದರಲ್ಲೂ ಯಾವುದೇ ಒಂದು ಪಕ್ಷ ತನ್ನದೇ ಸ್ವಂತ ಬಲದ ಮೇಲೆ ಅವಶ್ಯಕವಾದ ಬಹುಮತವನ್ನು ಪಡೆಯಲು ಸಾಧ್ಯವಾಗದೇ ಇದ್ದಾಗ ಇಂತಹ ಅವಕಾಶಗಳು ಸಣ್ಣಪುಟ್ಟ ಪಕ್ಷಗಳಿಗೆ ಹೇರಳವಾಗಿ ದೊರೆಯುತ್ತವೆ. ಇದಕ್ಕೆ ಎದ್ದು ಕಾಣುವ ಉದಾಹರಣೆಗಳೆಂದರೆ, ವಾಜಪೇಯಿಯವರು ಎರಡನೆಯ ಬಾರಿಗೆ ಪ್ರಧಾನಿಯಾಗಿದ್ದಾಗ ಶ್ರೀಮತಿ ಜಯಲಲಿತಾ ಅವರ ಎಐಎಡಿಎಂಕೆ ಪಕ್ಷ, ಕೇವಲ 18 ಮಂದಿ ಸದಸ್ಯರನ್ನು ಹೊಂದಿದ್ದ ಪಕ್ಷ, ಅವರಿಗೆ ಬೆಂಬಲಕೊಟ್ಟಿತು. ಅದರಲ್ಲೂ ಒಟ್ಟು 542 ಸದಸ್ಯರಿದ್ದ ಸದನದಲ್ಲಿ ಕೇವಲ 18 ಸದಸ್ಯರನ್ನು ಹೊಂದಿದ್ದ, ಒಟ್ಟು ಸದನದ ಸದಸ್ಯತ್ವದ ಶೇಕಡ 3.5 ರಷ್ಟಕ್ಕಿಂತ ಕಡಿಮೆ ಸಂಖ್ಯಾಬಲ ಹೊಂದಿದ್ದ ಪಕ್ಷ, ಸರ್ಕಾರವನ್ನು ತನ್ನ ಬೆರಳುಗಳಿಂದ ತನಗೆ ಬೇಕಾದಂತೆ ಕುಣಿಸುವಷ್ಟು ಪ್ರಾಬಲ್ಯ ಪಡೆಯಿತು. ಸರ್ಕಾರದ ಪತನಕ್ಕೂ ಅಂತಿಮವಾಗಿ ಅದೇ ಕಾರಣವಾಯಿತು. ಆಗ ಶ್ರೀಮತಿ ಜಯಲಲಿತಾ ಅವರ ಪಕ್ಷ ವರ್ತಿಸಿದ ರೀತಿಯಲ್ಲೇ ಡಿಎಂಕೆ ಪಕ್ಷ 2ಜಿ ಸ್ಪೆಕ್ಟ್ರಂ ಹಗರಣದಲ್ಲಿ ಬುದ್ಧಿಗೆ ಸುಲಭ ಗ್ರಾಹ್ಯವಲ್ಲದ ದೊಡ್ಡಮೊತ್ತ 1.76 ಲಕ್ಷ ಕೋಟಿ ರೂ.ಗಳ ಹಗರಣದಲ್ಲಿ ವರ್ತಿಸಿತು. ವೈಯಕ್ತಿಕವಾಗಿ ಕಳಂಕರಹಿತ ವ್ಯಕ್ತಿತ್ವದವರೆಂದು ಪ್ರಸಿದ್ಧವಾದ ಶ್ರೀ ಮನಮೋಹನಸಿಂಗ್ ಅವರು ಈ ಹಗರಣ ನಡೆದಾಗ ಮೂಕಪ್ರೇಕ್ಷಕರಾಗಿ ಕುಳಿತುಕೊಳ್ಳಬೇಕಾಯಿತು. ಅವರೇ ಒಪ್ಪಿಕೊಂಡಂತೆ ಸಮ್ಮಿಶ್ರ ಸರ್ಕಾರವನ್ನು ನಡೆಸಲು ಅವಶ್ಯಕವಾಗುವ ರಾಜೀಮಾರ್ಗಗಳಿಗೆ ಅವರು ಒಳಗಾಗಬೇಕಾಯಿತು.

ಪಕ್ಷಗಳ ಪದ್ಧತಿಯ ಪ್ರಜಾಪ್ರಭುತ್ವಕ್ಕೆ ಇನ್ನೊಂದು ಎದ್ದು ಕಾಣುವಂತಹ ಮಾದರಿಯೆಂದರೆ ಫ್ರಾನ್ಸ್. ಅವರೂ ನಮ್ಮಂತೆಯೇ ಪಾರ್ಲಿಮೆಂಟರಿ ವಿಧಾನದ ಪ್ರಜಾಪ್ರಭುತ್ವವನ್ನು ಹೊಂದಿದ್ದರು. ನಮ್ಮಂತೆಯೇ ಆ ದೇಶವೂ ಸಹ ಸತತವಾಗಿ ಅಸ್ಥಿರ ಸರ್ಕಾರಗಳನ್ನು ಕಾಣುತ್ತಾ ಬಂದಿತು. ಜೊತೆ ಜೊತೆಗೇ ಕೊನೆಯಿಲ್ಲದೇ ಪಕ್ಷಗಳು ಹುಟ್ಟುತ್ತಲೇ ಹೋದವು. ಇದ್ದ ಪಕ್ಷಗಳು ಒಡೆಯುತ್ತಲೇ ಹೋದವು. ಈ ಪ್ರಕ್ರಿಯೆ ಸತತವಾಗಿ ನಡೆಯುತ್ತಾ ಹೋಯಿತು. ನಮಗಿಂತ ಗಾತ್ರದಲ್ಲಿ ತುಂಬಾ ಚಿಕ್ಕದಾದ ಈ ದೇಶ 1946–58 ರ ನಡುವಿನ 12 ವರ್ಷಗಳಲ್ಲಿ 14 ಪಕ್ಷಗಳನ್ನು ಪಡೆದಿತ್ತು. 26 ವಿಭಿನ್ನ ಸರ್ಕಾರಗಳನ್ನು ಪಡೆದಿತ್ತು. 1958 ರಲ್ಲಿ ಈ ದೇಶ ಅಧ್ಯಕ್ಷೀಯ ಪದ್ಧತಿಯ ಪ್ರಜಾಪ್ರಭುತ್ವ ವಿಧಾನವನ್ನು ಜಾರಿಗೆ ತಂದುಕೊಂಡಿತು. ಅದು ಎಲ್ಲಾ ರೀತಿಯಲ್ಲೂ ಅಮೆರಿಕಾದ ಮಾದರಿಯದೇನೂ ಅಲ್ಲ. ಆದರೆ ಅನೇಕ ರೀತಿಗಳಲ್ಲಿ ಅದರ ತರಹದ್ದೇ. ಆಗಿನಿಂದ ಅಲ್ಲಿ ಸ್ಥಿರವಾದ ಸರ್ಕಾರಗಳಿರುವುದು ಮಾತ್ರವಲ್ಲದೇ ಪಕ್ಷಗಳ ಸಂಖ್ಯೆಯೂ ತೀರ ಕಡಿಮೆಯಾಗಿದೆ. ಮೊದಲಿದ್ದ 14 ಪಕ್ಷಗಳಿಗೆ ಬದಲಾಗಿ ಈಗ ಕೇವಲ 4

ಪ್ರಮುಖ ಪಕ್ಷಗಳಿವೆ. ಈ ನಾಲ್ಕೂ ಪಕ್ಷಗಳೂ ಸಹ ಎರಡು ರೀತಿಯ ಸಮ್ಮಿಶ್ರಗಳಾಗಿ –ಒಂದು ಬಲಪಂಥದ್ದು, ಇನ್ನೊಂದು ಎಡಪಂಥದ್ದು–ರೂಪುಗೊಂಡು ಯಶಸ್ವಿ, ಪ್ರಜಾಪ್ರಭುತ್ವಕ್ಕೆ ಅವಶ್ಯಕವಾದ ದ್ವಿಪಕ್ಷೀಯ ವಿಧಾನದ ಕಡೆಗೆ ವಾಲಿದೆ.

ರಾಜಕೀಯ ಭ್ರಷ್ಟಾಚಾರವನ್ನು ಆದಷ್ಟು ಕಡಿಮೆ ಮಾಡುವುದು.

ಕಳೆದ 20 ವರ್ಷಗಳಿಂದ ನಾವು ಕಾಣುತ್ತಿರುವುದು ಯಾರಿಗೂ ಬಹುಮತವಿಲ್ಲದ ಲೋಕಸಭೆ, ಅಸ್ಥಿರ ಸರ್ಕಾರಗಳು ಮತ್ತು ಯಾವುದೇ ತತ್ವ ನೀತಿಗಳಿಲ್ಲದ, ಕೇವಲ ಅಧಿಕಾರದಲ್ಲಿ ಪಾಲು ಪಡೆಯಲು ಸನ್ನದ್ಧರಾದ ಸಮ್ಮಿಶ್ರ ಸರ್ಕಾರಗಳು. ರಾಜಕೀಯ ಪಕ್ಷಗಳು, ಸರ್ಕಾರದಲ್ಲಿ ಭಾಗವಹಿಸುವುದು, ಕೇವಲ ಅಧಿಕಾರದಲ್ಲಿನ ಪಾಲಿಗಾಗಿ. ಈ ಅವಧಿಯಲ್ಲಿ ಏಳು ಲೋಕಸಭಾ ಚುನಾವಣೆಗಳಾದವು. ಅವುಗಳಲ್ಲಿ ಮೂರು ಮಧ್ಯಕಾಲೀನ ಚುನಾವಣೆಗಳು. ವಿವಿಧ ಸಮ್ಮಿಶ್ರಣಗಳ ಸರ್ಕಾರಗಳು. ಹತ್ತು ಜನ ಪ್ರಧಾನಮಂತ್ರಿಗಳು. ಭಾರತದಲ್ಲಿ ಮೊದಲಿನಿಂದಲೂ ಭ್ರಷ್ಟಾಚಾರ ಲಂಚ, ಖುಷುವತ್ತುಗಳು ಒಂದು ಸಮಸ್ಯೆಯಾಗಿದ್ದರೂ, ಮಂತ್ರಿಗಳ ಸ್ತರದ ಭ್ರಷ್ಟಾಚಾರ ಈಗ ಮುಗಿಲು ಮುಟ್ಟಿ ಅದಕ್ಕೆ ಮಿತಿಯೇ ಇಲ್ಲವಾಗಿದೆ. ನಾವು ವಾಸ್ತವವಾಗಿ ಕಾಣುತ್ತಿರುವುದೇನೆಂದರೆ, 2 ಜಿ ಹಗರಣ ತೋರಿಸಿಕೊಟ್ಟಿರುವಂತೆ ಸಮ್ಮಿಶ್ರ ರಾಜಕೀಯ ಹೇಗೆ ದೇಶವನ್ನು ಲೂಟಿ ಮಾಡಲು ಒಂದು ಅವಕಾಶವಾಗಿ ಉಪಯೋಗಿಸಲ್ಪಡುತ್ತಿದೆ ಎಂಬುದು. ಇದು ದೇಶದ ಸಂಸ್ಕೃತಿಗೆ, ಒಂದು ಕಳಂಕವಾಗಿ ಇಡೀ ಆಡಳಿತ ಯಂತ್ರದ ನೈತಿಕ ಧೈರ್ಯೋತ್ಸಾಹಗಳನ್ನೆಲ್ಲಾ ನುಂಗಿ ಹಾಕಿದೆ. ಸಂಸ್ಕೃತದಲ್ಲಿನ ಪ್ರಸಿದ್ಧ ಗಾದೆ ಹೇಳುವಂತೆ, ' ಯಥಾರಾಜಾ ತಥಾಪ್ರಜಾ' ರಾಜನಂತೆ ಪ್ರಜೆಗಳು, ಮೇಲಿನಿಂದ ಇಳಿದು ಬರುತ್ತಿರುವ ಭ್ರಷ್ಟಾಚಾರ ತ್ವರಿತಗತಿಯಲ್ಲಿ ಎಲ್ಲಾ ರಾಜಕೀಯ ಮತ್ತು ಸಾಮಾಜಿಕ ಸ್ತರಗಳನ್ನು ಕಲುಷಿತಗೊಳಿಸುತ್ತಿದೆ. ಅದರಿಂದಲೇ ಸಮಾಜದ ಮತ್ತು ನಮ್ಮ ದೇಶದ ರಾಜಕೀಯದ ಎಲ್ಲಾ ಸ್ತರಗಳಲ್ಲೂ ಅದು ತಾಂಡವವಾಡುತ್ತಿರುವುದು ಮತ್ತು ಇಡೀ ಸಮಾಜವನ್ನೇ ಭ್ರಷ್ಟಗೊಳಿಸುತ್ತಿರುವುದು.

ಅಮೆರಿಕಾದ ವ್ಯವಸ್ಥೆಯಲ್ಲಿ ಇರುವಂತಹ ಶಾಸಕಾಂಗ ಮತ್ತು ಕಾರ್ಯಾಂಗದ ಅಧಿಕಾರಗಳಲ್ಲಿನ ಪ್ರತ್ಯೇಕತೆ, ರಾಷ್ಟ್ರೀಯ ಸ್ತರದಲ್ಲಿ ರಾಷ್ಟ್ರಾಧ್ಯಕ್ಷರ ಅಧಿಕಾರದ ಅವಧಿಯ ಮತ್ತು ರಾಜ್ಯಗಳ ಸ್ತರದಲ್ಲಿ ಗವರ್ನರ್‌ಗಳ ಅಧಿಕಾರಾವಧಿಯ ಸ್ಥಿರತೆ ಅಮೆರಿಕದಲ್ಲಿ ಭ್ರಷ್ಟಾಚಾರದ ತಡೆಗೆ – ನಮ್ಮಲ್ಲಿ ಎಲ್ಲಾ ಸ್ಥಳಗಳಲ್ಲೂ ಹೇರಳವಾಗಿ ಕಂಡು ಬರುವಂತಹ ಭ್ರಷ್ಟಾಚಾರದ ತಡೆಗೆ ಒಂದು ಪರಿಣಾಮಕಾರೀ ಸಾಧನವಾಗಿದೆ. ಬಹುತೇಕ ಸಂದರ್ಭಗಳಲ್ಲಿ ಪ್ರಧಾನಮಂತ್ರಿಯಾಗಲೀ, ರಾಜ್ಯದ ಮುಖ್ಯಮಂತ್ರಿಯಾಗಲೀ, ಭ್ರಷ್ಟಾಚಾರದಲ್ಲಿ ನಿರತರಾದ ಮಂತ್ರಿಗಳ ಮೇಲೆ ಕ್ರಮ ಕೈಗೊಳ್ಳಲು ವಿಫಲರಾಗುತ್ತಿರುವುದುಕ್ಕೆ ಕಾರಣವೇನೆಂದರೆ, ಅವರು ತಮ್ಮ ಸ್ಥಾನದ ಉಳಿವಿಗಾಗಿ ಅಂತಹ ಮಂತ್ರಿಗಳ ಮತ್ತು ಬೆಂಬಲಿಗ ಸದಸ್ಯರ ಮೇಲೆ ಅವಲಂಬನೆ ಹೊಂದಿರುವುದು. ಅಮೆರಿಕದ ವ್ಯವಸ್ಥೆಯಲ್ಲಾದರೋ ಅಮೆರಿಕಾದ ಕಾಂಗ್ರೆಸ್‌ನ ಸದಸ್ಯರು, (ಅಲ್ಲಿನ ಸೆನೇಟ್– ಕೆಳಮನೆ)

ಮಂತ್ರಿಮಂಡಳದ ಭಾಗವಾಗದೇ ಇರುವುದರಿಂದ, ಅವರು ಯಾವುದೇ ಮುಲಾಜು, ಭಿಡೆಯಿಲ್ಲದೆ ಮಂತ್ರಿ ಮಂಡಳದವರ ಭ್ರಷ್ಟ ವರ್ತನೆಗಳನ್ನು ಬಹಿರಂಗಗೊಳಿಸಲು ಅವಕಾಶವಿದೆ. ರಾಷ್ಟ್ರಾಧ್ಯಕ್ಷರ ಪಕ್ಷದವರೇ ಆದ ಸೆನೆಟ್ ಸದಸ್ಯರೂ ಸಹ ಮಂತ್ರಿಮಂಡಳದ ಸದಸ್ಯರ ದುರ್ವರ್ತನೆಗಳನ್ನು ಬಹಿರಂಗಗೊಳಿಸಲು ಹಿಂದೇಟು ಹಾಕುವುದಿಲ್ಲ. ಆದರೆ ನಮ್ಮಲ್ಲಾದರೋ, ಮಂತ್ರಿಗಳ ಭ್ರಷ್ಟಾಚಾರಗಳನ್ನು ಹೊರಹಾಕಲು ಏಕೆ ಹಿಂಜರಿಯುತ್ತಾರೆಂಬುದು ನಮಗೆಲ್ಲಾ ಗೊತ್ತಿರುವ ವಿಷಯವೇ ಆಗಿದೆ.

ಪಾರ್ಲಿಮೆಂಟಿನ ಹೊರಗಿನಿಂದ ಮಂತ್ರಿಗಳನ್ನು ಆರಿಸುವ ವಿಧಾನ ಅಮೆರಿಕದಲ್ಲಿನಂತೆ, ಫ್ರಾನ್ಸ್‌ನಲ್ಲೂ ಪ್ರಚಲಿತವಾಗಿದೆ. ಅಲ್ಲಿ ಮಂತ್ರಿಮಂಡಳದ ಸದಸ್ಯರಾದರೆ ತಮ್ಮ ಶಾಸನ ಸಭಾ ಸದಸ್ಯತ್ವಕ್ಕೆ ರಾಜೀನಾಮೆ ಕೊಡಬೇಕಾಗುತ್ತದೆ. ಜರ್ಮನಿಯಲ್ಲಿ ಅಲ್ಲಿನ ಬುಂಡೆಸ್ಟಾಗ್ (ಫೆಡರಲ್ ಪಾರ್ಲಿಮೆಂಟ್) ಸದಸ್ಯರ ಬಹುಮತದಿಂದ ಚಾನ್ಸೆಲರ್ ಅವರು ಆಯ್ಕೆಯಗುವರಾದರೂ ಸಹ, ಅದರ ಸಂವಿಧಾನ, ಚಾನ್ಸೆಲರ್‌ರಿಗೆ ತಮ್ಮ ಮಂತ್ರಿ ಮಂಡಳದ ಸದಸ್ಯರನ್ನು ಬುಂಡೆಸ್ಟಾಗ್‌ನ ಹೊರಗಡೆಯ ವ್ಯಕ್ತಿಗಳಿಂದ ರಚಿಸಲು ಅವಕಾಶ ಕೊಡುತ್ತದೆ. ಜಪಾನ್‌ನಲ್ಲಿ ಈಗಿರುವ ಸಂವಿಧಾನದ ಪ್ರಕಾರ ಅಲ್ಲಿನ ಡಯೆಟ್ (ಪಾರ್ಲಿಮೆಂಟ್) ಪರಮಾಧಿಕಾರ ಹೊಂದಿದ್ದರೂ ಸಹ, ಪ್ರಧಾನಮಂತ್ರಿ ಡಯೆಟ್‌ನಿಂದ ಹೊರಗಡೆಯಿಂದ ಮಂತ್ರಿಮಂಡಳದ ಅರ್ಧದಷ್ಟು ಸದಸ್ಯರನ್ನು ನೇಮಿಸಲು ಅವಕಾಶವಿದೆ.

**ಲೋಕಪಾಲ್‌ಮಸೂದೆ:**

42 ವರ್ಷಗಳಿಂದ ಈ ಮಸೂದೆಯನ್ನು ಮುಂದೆ ಮುಂದೆ ತಳ್ಳುತ್ತಾ ಬಂದಿದ್ದರೂ ಸಹ ಲೋಕಪಾಲ್ ಮಸೂದೆಯನ್ನು ಕಾನೂನಾಗಿ ಪರಿವರ್ತಿಸಲು ಸರ್ಕಾರದ ಮೇಲೆ ಈಗ ವಿಪರೀತ ಒತ್ತಡ ಬರುತ್ತಿದೆ. ಅದು ಕಾನೂನಾದರೆ ಒಂದು ಸ್ವತಂತ್ರ ಅಧಿಕಾರಸ್ಥಾನಕ್ಕೆ ಭ್ರಷ್ಟಾಚಾರದ ಕಾರಣಕ್ಕಾಗಿ ಯಾವುದೇ ರಾಜಕಾರಣಿ ಅಥವಾ ಅಧಿಕಾರಿಯ ಮೇಲೆ, ಯಾವುದೇ ಮಂತ್ರಿ, ಮುಖ್ಯಮಂತ್ರಿ, ಪ್ರಧಾನಮಂತ್ರಿಯ ಅಂಗೀಕಾರದ ಮುದ್ರೆ ಇಲ್ಲದೆ ಸ್ವತಂತ್ರ್ಯವಾಗಿ ತನಿಖೆ ನಡೆಸುವ ಮತ್ತು ಕಾನೂನುಕ್ರಮ ನಡೆಸುವ ಅಧಿಕಾರ ಬರುತ್ತದೆ. ಇದೊಂದು ಸ್ವಾಗತಾರ್ಹವಾದ ಬೆಳವಣಿಗೆಯಾದರೂ ಸಹ, ಅಣ್ಣಾಹಜಾರೆಯವರ ಉಪವಾಸದ ಸತ್ಯಾಗ್ರಹದಿಂದ ಇದಕ್ಕೊಂದು ಹರ್ಷೋದ್ರಿಕ್ತತೆ ಬಂದಿದ್ದರೂ ಸಹ, ಇದು ಭ್ರಷ್ಟಾಚಾರದ ನಿರ್ಮೂಲ ಮಾಡುವಂತಹ ರಾಮಬಾಣವೇನೂ ಅಲ್ಲ ಎಂಬುದನ್ನೂ ನಾವು ಮನಗಾಣಬೇಕು. ಲೋಕಪಾಲ ವಿಧೇಯಕಕ್ಕೆ ಅಂಗೀಕಾರ ಮುದ್ರೆ ಬಿದ್ದರೆ ಭ್ರಷ್ಟಾಚಾರ ತಾನಾಗಿಯೇ ಸಂಪೂರ್ಣವಾಗಿ ನಿರ್ಮೂಲ ಹೊಂದುವುದು ಎಂಬ ಭ್ರಮೆ ಹೊಂದಿರುವುದು ಸರಿಯಲ್ಲ. ಭ್ರಷ್ಟಾಚಾರವನ್ನು ನಿರ್ಮೂಲ ಮಾಡಲು ಅಥವಾ ತುಂಬಾ ಕಡಿಮೆ ಇರುವಂತೆ ಮಾಡಲು ಇರುವ ಪರಿಣಾಮಕಾರಿಯಾದ ಮತ್ತು ತರ್ಕಬದ್ಧವಾದ ಮಾರ್ಗವೆಂದರೆ, ಉನ್ನತಾಧಿಕಾರದ ಮಟ್ಟದ ಸ್ಥಳಗಳಲ್ಲಿ ಪ್ರಾಮಾಣಿಕರಾದ ಮತ್ತು ಸಮರ್ಥರಾದ ವ್ಯಕ್ತಿಗಳನ್ನು ನೇಮಿಸುವಂತಹ ವ್ಯವಸ್ಥೆಯನ್ನು

ಹೊಂದುವುದು. ಅಂದರೆ ಮಂತ್ರಿಗಳ ಸ್ಥಳದ ಸ್ಥಾನದಲ್ಲಿ ಅಂತಹವರನ್ನು ನೇಮಿಸುವುದು, ಮತ್ತು ಸುವ್ಯವಸ್ಥಿತವಾದ ಅಡೆ ತಡೆಗಳು ಇತಿಮಿತಿಗಳು – ಚೆಕ್ಸ್ ಅಂಡ್ ಬ್ಯಾಲೆನ್ಸಸ್ – ವ್ಯವಸ್ಥೆಯನ್ನು ಏರ್ಪಡಿಸುವುದು. ಆ ರೀತಿ ಆದ ಮೇಲೆ ತಪ್ಪಿತಸ್ಥರನ್ನು ತನಿಖೆ ಮಾಡಿ, ವಿಚಾರಣೆಗೆ ಗುರಿಪಡಿಸಲು ಇರುವ ಉನ್ನತಮಟ್ಟದ ಅಂತಿಮವಾದ ಅಧಿಕಾರಸ್ಥಾನ ಲೋಕಪಾಲರದ್ದಾಗಬೇಕು.

ಅಧ್ಯಕ್ಷೀಯ ವ್ಯವಸ್ಥೆಗೆ ಸಂಬಂಧಿಸಿದಂತೆ ಇರುವ ತಪ್ಪು ಕಲ್ಪನೆಗಳು.

ಅಧ್ಯಕ್ಷೀಯ ವ್ಯವಸ್ಥೆಗೆ ಸಂಬಂಧಪಟ್ಟಂತೆ ಇರುವ ಬಹುದೊಡ್ಡ ಭೀತಿಯೆಂದರೆ ಅದು ಸರ್ವಾಧಿಕಾರಕ್ಕೆ ಎಡೆಮಾಡಿಕೊಡಬಹುದೆಂದು. ಪಾರ್ಲಿಮೆಂಟರಿ ವ್ಯವಸ್ಥೆಯಾಗಲೀ ಅಧ್ಯಕ್ಷೀಯ ವ್ಯವಸ್ಥೆಯಾಗಲೀ, ಸರ್ವಾಧಿಕಾರಕ್ಕೆ ಎಡೆಮಾಡಿಕೊಡದಂತೆ ಮಾಡಲು ಇರಬೇಕಾದದ್ದು ವ್ಯವಸ್ಥೆಯಲ್ಲೇ ಅಂತರ್ಗತವಾಗಿರುವಂತಹ ಅಡೆತಡೆಗಳು ಮತ್ತು ಸಮತೋಲನಕ್ಕೆ ತರುವಂತಹ ಏರ್ಪಾಟುಗಳು. ಜರ್ಮನಿಯಲ್ಲಿ ಮೂರನೆಯ ರೀಕ್ ಸ್ಟಾಗ್‌ನ ಅವಧಿಯಲ್ಲಿ (1920–1939), ಕೇವಲ ಏಳು ವರ್ಷಗಳಷ್ಟು ಅಲ್ಪಕಾಲದಲ್ಲಿ, ಆಗಿದ್ದ ಪಾರ್ಲಿಮೆಂಟರಿ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ದುರುಪಯೋಗಪಡಿಸಿಕೊಂಡು ಹಿಟ್ಲರ್ ಸರ್ವಾಧಿಕಾರಿಯಾಗಲು ಅವಕಾಶವಾಯಿತು. ನಮ್ಮದೇ ಪಾರ್ಲಿಮೆಂಟರಿ ವ್ಯವಸ್ಥೆಯಲ್ಲಿ, ದಿವಂಗತ ಶ್ರೀಮತಿ ಇಂದಿರಾಗಾಂಧಿಯವರ ಕಾಲದಲ್ಲಿ ತುರ್ತುಪರಿಸ್ಥಿತಿ ಇದ್ದಾಗ ಸರ್ವಾಧಿಕಾರಿ ಸ್ಥಿತಿಗೆ ಬಹುಸಮೀಪದ ಸ್ಥಿತಿ ಭಾರತದಲ್ಲಿತ್ತು. ಈ ತುರ್ತುಪರಿಸ್ಥಿತಿಯ ಅವಧಿಯಲ್ಲಿ ಸಂವಿಧಾನದ 42ನೇಯ ತಿದ್ದುಪಡಿ ಅಂಗೀಕೃತವಾಗಿದ್ದು, ನಾವು ಸರ್ವಾಧಿಕಾರದ ಬಾಗಿಲು ತಟ್ಟುವ ಸ್ಥಿತಿಗೆ ಬಂದಿದ್ದೆವು. ಈ ತಿದ್ದುಪಡಿ ಸಂವಿಧಾನದ 368ನೇಯ ವಿಧಿಯನ್ನು ತಿದ್ದುಪಡಿ ಮಾಡಿ, ಸಂವಿಧಾನದ ಯಾವುದೇ ಭಾಗವನ್ನು ತಿದ್ದುಪಡಿ ಮಾಡುವ ಅಧಿಕಾರವನ್ನು ಪಾರ್ಲಿಮೆಂಟಿಗೆ ಕೊಟ್ಟಿತ್ತು. ಅಂತಹ ಕ್ರಮವನ್ನು ಯಾವುದೇ ಕಾರಣಕ್ಕೂ ಯಾವುದೇ ನ್ಯಾಯಾಲಯ ಪ್ರಶ್ನಿಸುವಂತಿರಲಿಲ್ಲ. ಅದೃಷ್ಟವಶಾತ್, ಜನತಾ ಸರ್ಕಾರದ ಕಾಲದಲ್ಲಿ ಈ ತಿದ್ದುಪಡಿ ರದ್ದಾಯಿತು.

ಸರ್ಕಾರದ ಮೂರು ಪ್ರಮುಖ ಅಂಗಗಳೆಂದರೆ, ಕಾರ್ಯಾಂಗ, ಶಾಸಕಾಂಗ, ಮತ್ತು ನ್ಯಾಯಾಂಗ. ವಿಶಾಲವಾಗಿ ನೋಡುವುದಾದರೆ, ಕಾರ್ಯಾಂಗದಲ್ಲಿ, ಕೇಂದ್ರದಲ್ಲಿ ಪ್ರಧಾನಮಂತ್ರಿ ಮತ್ತು ಅವರ ಮಂತ್ರಿಮಂಡಳ, ರಾಜ್ಯದಲ್ಲಿ ಮುಖ್ಯಮಂತ್ರಿ ಮತ್ತು ಅವರ ಮಂತ್ರಿಮಂಡಳ ಸೇರುತ್ತದೆ. ಸರಿಯಾದ ಪ್ರಜಾಪ್ರಭುತ್ವಾತ್ಮಕವಾದ ಅಧ್ಯಕ್ಷೀಯ ವ್ಯವಸ್ಥೆಯಲ್ಲೇ ಅಂತರ್ಗತವಾದ ಸರಿಯಾದ ಅಡೆತಡೆಗಳು ಇತಿಮಿತಿಗಳು, ವಿಧಿ, ನಿಷೇಧಗಳು, ಇರುವಂತಿದ್ದರೆ ಕಾರ್ಯಾಂಗ ಮತ್ತು ಶಾಸಕಾಂಗದ ಅಧಿಕಾರಗಳು ಸಂಪೂರ್ಣವಾಗಿ, ಪರಿಣಾಮಕಾರಿಯಾಗಿ ಪ್ರತ್ಯೇಕವಾಗಿರಬೇಕು.

ಅಂದರೆ ಶಾಸಕಾಂಗ, ಕಾರ್ಯಾಂಗದ ಭಾಗವಾಗಿರಬಾರದು. ಬೇರೆ ಇತರ ಅಧ್ಯಕ್ಷೀಯ ಸಂವಿಧಾನಗಳಿಗೆ ಹೋಲಿಸಿದರೆ ಅಮೆರಿಕ ಮತ್ತು ಫ್ರಾನ್ಸ್‌ನ ಸಂವಿಧಾನಗಳು ಈ ವಿಷಯದಲ್ಲಿ ಒಂದು ಕೈ ಮೇಲಿದೆ. ಅಮೆರಿಕಾದ ವ್ಯವಸ್ಥೆ ಸ್ವಲ್ಪ ಹೆಚ್ಚು ಕಡಿಮೆ, ಒಂದಕ್ಕೊಂದು ಅಂತರ್ಗತ ಅಡೆತಡೆಗಳನ್ನು ಹೊಂದಿರುವ ವ್ಯವಸ್ಥೆಗಳಲ್ಲಿ ಮಾದರಿ ವ್ಯವಸ್ಥೆಗೆ ತುಂಬಾ ಹತ್ತಿರದಲ್ಲಿದೆ. ಒಂದು ಕಡೆ ದೇಶದಲ್ಲಿನ ತಜ್ಞರನ್ನು, ಪರಿಣಿತರನ್ನು, ಉತ್ತಮರನ್ನು ತಮ್ಮ ಮಂತ್ರಿಮಂಡಳದ ಸ್ಥಾನಗಳಿಗೆ ಸೇರಿಸಿಕೊಳ್ಳುವ ಸಂಪೂರ್ಣ ಸ್ವಾತಂತ್ರ್ಯ ಅವರಿಗಿದ್ದರೂ ಅವರು, ಅಂತಹ ನೇಮಕಗಳಿಗೆ, ಮಂತ್ರಿಮಂಡಳದ ಸ್ಥಾನಗಳ ಎಲ್ಲಾ ನೇಮಕಗಳಿಗೆ, ಶಾಸಕಾಂಗದ, ಸೆನೇಟಿನ ಸಮಿತಿಗಳ ಅಂಗೀಕಾರವನ್ನು ಪಡೆಯಬೇಕಾಗುತ್ತದೆ. ಸೆನೇಟಿನ ಯಾವ ಸದಸ್ಯರಿಗೂ ಈ ನೇಮಕಾತಿಗಳಲ್ಲಿ ತಮ್ಮದೇ ಹಿತಾಸಕ್ತಿಗಳಿರುವುದಿಲ್ಲ. ಸೆನೆಟ್‌ನ ಯಾವುದೇ ಸದಸ್ಯ ಮಂತ್ರಿ ಮಂಡಳದಲ್ಲಿನ ಸ್ಥಾನವನ್ನು ಹೊಂದುವಂತಿಲ್ಲ. ಶಾಸಕಾಂಗಕ್ಕೆ ಬಂದರೆ ಕಾಂಗ್ರೆಸ್‌ನ ಸದಸ್ಯರು ಮೇಲ್ಮನೆ ಮತ್ತು ಕೆಳಮನೆಯ ಸದಸ್ಯರು ಯಾವುದೇ ಶಾಸನದ ವಿಷಯಕ್ಕೆ ಬಂದಾಗ ಸ್ವತಂತ್ರವಾಗಿ ಮತ ಚಲಾಯಿಸುವ ಅಧಿಕಾರ ಅವರಿಗಿದೆ. ಅವರು ಪಕ್ಷದ ಯಾವುದೇ ನಿರ್ಬಂಧಕ್ಕೆ ಒಳಗಾಗದೇ ಮತ ಚಲಾಯಿಸಬಹುದು. ಅಲ್ಲಿ " ವ್ಹಿಪ್ " ಎಂಬ ಪದವೇ ಇಲ್ಲ. ಒಂದು ಪ್ರಬಲವಾದ " ಸಮಿತಿಗಳ ವ್ಯವಸ್ಥೆಯಿಂದ " ಎಲ್ಲಾ ಮಸೂದೆಗಳೂ, ಆಯೋಜಿತ ಶಾಸನಗಳೂ ಪಕ್ಷಪಾತವಿಲ್ಲದೆ, ವೃತ್ತಿಪರ ನಿಷ್ಠೆಯಿಂದ ವಿಶ್ಲೇಷಣೆಗೆ ಒಳಗಾಗುತ್ತವೆ.

ವಿವಿಧ ಕ್ಷೇತ್ರಗಳಲ್ಲಿನ ಅನೇಕ ಶ್ರೇಷ್ಠ ವ್ಯಕ್ತಿಗಳು, ಘನ ವಿದ್ವಾಂಸರು, ಶ್ರೀ ಬಿ.ಕೆ.ನೆಹ್ರು, ಶ್ರೀ ನಾನಿ ಪಾಲ್ಖಿವಾಲಾ ಶ್ರೀ.ಜೆ.ಆರ್.ಡಿ.ತಾತಾ, ಶ್ರೀ ಅರುಣಶೌರಿ, ಮುಂತಾದವರೂ ಸೇರಿದಂತೆ ಅನೇಕ ಪರಿಣಿತರು, ಅಧ್ಯಕ್ಷೀಯ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಪ್ರತಿಪಾದಿಸಿದ್ದಾರೆ. ಆದರೆ ಇದಕ್ಕಾಗಿ ಯಾವುದೇ ವ್ಯವಸ್ಥಿತವಾದ, ಸಂಘಟಿತವಾದ ಪ್ರಯತ್ನ ನಡೆದಿಲ್ಲ.

ಈ ಲೇಖನವನ್ನು ಮುಕ್ತಾಯಗೊಳಿಸುವುದಕ್ಕೆ ಮುಂಚೆ, **1947** ರಲ್ಲಿ ತಾವು ರಾಜ್ಯಾಂಗ ಸಭೆಯ ಮುಂದೆ ಮಂಡಿಸಿದ ಮನವಿಯಲ್ಲಿ ಡಾ॥ ಬಾಬಾ ಸಾಹೇಬ್ ಅಂಬೇಡ್ಕರ್ ಅವರುಭವಿಷ್ಯವಾಣಿಯಂತೆ ನುಡಿದ ಮಾತುಗಳನ್ನು ಸ್ಮರಣೆಗೆ ತಂದು ಕೊಳ್ಳುವುದು ಪ್ರಸ್ತುತವೆನಿಸುತ್ತದೆ.

ಭಾರತದಲ್ಲಿನ ಶಾಸನ ಸಭೆಗಳಲ್ಲಿ, ಇಲ್ಲಿರುವ ಜಾತಿ ಸಂಘರ್ಷ ಮತ ಸಂಘರ್ಷ ಗಳಿಂದಾಗಿ, ಪಕ್ಷಗಳು ಮತ್ತು ಗುಂಪುಗಳು ಹೇರಳವಾಗಿ ಹುಟ್ಟಿಕೊಳ್ಳುತ್ತವೆ. ಆ ರೀತಿ ಆದರೆ ಇರುವ ಸಾಧ್ಯತೆ, ಸಾಧ್ಯತೆ ಏನು ಖಂಡಿತವಾಗಿ ಆಗಿಯೆ ತೀರುವುದಾದ ವಿಷಯವೆಂದರೆ ಪಾರ್ಲಿಮೆಂಟರಿ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಶಾಸಕಾಂಗದಲ್ಲಿ, ಬರುವ ಪ್ರತಿಕೂಲ ಮತದಿಂದಾಗಿ ಕಾರ್ಯಾಂಗ, ರಾಜೀನಾಮೆ ಕೊಟ್ಟು ನಿಷ್ಕ್ರಮಿಸಬೇಕಾಗುತ್ತದೆ. ಅದರಿಂದ ಕಾರ್ಯಾಂಗದ ಅಸ್ಥಿರತೆಯಿಂದ ಭಾರತ ನರಳಬೇಕಾಗುತ್ತದೆ. ಗುಂಪುಗಳು, ಸಮುದಾಯಗಳು, ಪಕ್ಷಗಳು, ತ್ವರಿತಗತಿಯಲ್ಲಿ ತಮ್ಮ ತಮ್ಮ ಸಣ್ಣಪುಟ್ಟ, ಉದ್ದೇಶಗಳ ಸಾಧನೆಗಳಿಗಾಗಿ ಸ್ಪರ್ಧೆಯಾಗುವುದು,

ಬೇರ್ಪಡೆಯಾಗುವುದು. ಮುಂತಾದವನ್ನು ಮಾಡಿಕೊಳ್ಳುತ್ತ ಹೋಗಿ ಸರ್ಕಾರಗಳ ಪತನಕ್ಕೆ ಕಾರಣವಾಗುತ್ತದೆ. ಬೇಗ ಬೇಗನೇ ಸರ್ಕಾರಗಳು ಪತನಗೊಂಡರೆ ಅದು ಅರಾಜಕತೆಯಲ್ಲದೇ ಬೇರೇನೂ ಅಲ್ಲ. ಅಮೆರಿಕದಲ್ಲಿನ ವ್ಯವಸ್ಥೆಯ ರೀತಿಯ ಕಾರ್ಯಾಂಗ ಇಷ್ಟೇ ಒಳ್ಳೆಯದಾದ, ಪ್ರಜಾಸತ್ತಾತ್ಮಕವಾದ ಮತ್ತು ಜವಾಬ್ದಾರಿಯುತ ಸರ್ಕಾರದ ವ್ಯವಸ್ಥೆ ಎಂಬುದರಲ್ಲಿ ಉತ್ಪ್ರೇಕ್ಷೆಯೇನಿಲ್ಲ".

ಜಶವಂತ ಬಿ. ಮೆಹ್ರಾ.

ಈ ಲೇಖನದ ಲೇಖಕರು ಸುಪ್ರಸಿದ್ಧ ಆರ್ಕಿಟೆಕ್ಟ್ ಮತ್ತು ಕನ್ಸಲ್ಟಿಂಗ್ ಇಂಜಿನೀಯರ್. ಅವರು ಸಿವಿಲ್ ಇಂಜಿನೀಯರಿಂಗ್‌ನಲ್ಲಿ ಅಮೆರಿಕದಲ್ಲಿ ಮಾಸ್ಟರ್ಸ್ ಪದವಿಯನ್ನು ಪಡೆದಿದ್ದಾರೆ. ಅವರು ಫೋರಂ ಫಾರ್ ಪ್ರೆಸಿಡೆನ್ಷಿಯಲ್ ಡೆಮೊಕ್ರಸಿ ಸಂಸ್ಥೆಯ ಸಂಚಾಲಕರಾಗಿದ್ದಾರೆ. ಅವರು ಕ್ವೆಸ್ಟ್ ಫಾರ್ ಎ ಬೆಟರ್ ಡೆಮೋಕ್ರಟಿಕ್ ಆಲ್ಟರ್ನೇಟೀವ್, ಎಲೆಕ್ಟೊರಲ್ ರಿಫಾರ್ಮ್ ಮುಂತಾದ ಅನೇಕ ಕೃತಿಗಳನ್ನು ರಚಿಸಿದ್ದಾರೆ. ಭಾರತದಲ್ಲಿನ ಇತರ ಸಂವೇದನಾಶೀಲ ಬುದ್ಧಿ ಜೀವಿಗಳಂತೆ ಅವರೂ ಸಹ ಪ್ರಸ್ತುತವಾಗಿ ಜಾರಿಯಲ್ಲಿರುವ ವ್ಯವಸ್ಥಾಕ್ರಮದಲ್ಲಿ ನಂಬಿಕೆ ಭರವಸೆಗಳನ್ನು ಕಳೆದುಕೊಂಡಿದ್ದಾರೆ. ಇದಕ್ಕೆ ಕಾರಣ ಕಳೆದ ನಾಲ್ಕು ದಶಕಗಳಿಂದ ತನ್ನಲ್ಲಿ ಅಂತರ್ಗತವಾಗಿರುವ ಕೊರತೆಗಳಿಂತ ಈಗಿನ ವ್ಯವಸ್ಥೆ ತುಂಬಾ ಅಸಮರ್ಪಕವಾಗಿದ್ದು ನಿರಾಶಾದಾಯಕ ಪರಿಸ್ಥಿತಿಯನ್ನುಂಟು ಮಾಡಿರುವುದೇ ಆಗಿದೆ. ಈ ರೀತಿಯ ನಿರಾಶಾಭಾವನೆ ಉಂಟಾಗಿ ಈಗಿನ ವ್ಯವಸ್ಥೆಯಲ್ಲಿ ಆದ ಭ್ರಮನಿರಸನವು ಅವರನ್ನು ಈ ವಿಚಾರದಲ್ಲಿ ತೀವ್ರವಾದ, ಆಳವಾದ ಅಧ್ಯಯನ ಕೈಗೊಳ್ಳುವಂತೆ ಪ್ರೇರಿಸಿ ಅವರು ವಿಭಿನ್ನ ವೃತ್ತಿಪರ ಕ್ಷೇತ್ರಕ್ಕೆ ಸೇರಿದ್ದರೂ ಸಹ ಈಗಿನ ಪರಿಸ್ಥಿತಿಗೆ ಕಾರಣಗಳನ್ನು ಹುಡುಕುವಂತೆ ಮಾಡಿದೆ.

ಪ್ರಶ್ನೆ: ಈಗಿರುವ ತರಹೆಯ ಪಾರ್ಲಿಮೆಂಟರಿ ಪ್ರಭುತ್ವದಿಂದ ಅಧ್ಯಕ್ಷೀಯ ವಿಧಾನಕ್ಕೆ ಬದಲಾಯಿಸಿಕೊಳ್ಳುವುದು ಹೇಗೆ ?

ಈ ರೀತಿ ಬದಲಾಯಿಸಿಕೊಳ್ಳಬೇಕಾದರೆ ಈಗಿನ ಸಂವಿಧಾನದ ಚೌಕಟ್ಟನ್ನು ಸಾಕಷ್ಟು ಬದಲಾವಣೆ ಮಾಡಬೇಕಾಗುತ್ತದೆ. ಲೇಖಕರ ಅಭಿಪ್ರಾಯದ ಪ್ರಕಾರ, ಅಂತಹ ಬದಲಾವಣೆಯನ್ನು ಸಂವಿಧಾನದ ವಿಧಿ 368ನ್ನು ಎರಡನೇ ವರ್ಗದ ತಿದ್ದುಪಡಿಯ ಮೂಲಕ ತಿದ್ದಿದರೆ ಇದು ಸಾಧ್ಯ. ಇದಕ್ಕೆ ಪಾರ್ಲಿಮೆಂಟ್ ಸದಸ್ಯರ ಮೂರನೇ ಎರಡರಷ್ಟು ಬಹುಮತ ಬೇಕಾಗುತ್ತದೆ. ಇದರಿಂದ ಸಂವಿಧಾನದ ಮೂಲಚೌಕಟ್ಟು ಬದಲಾವಣೆ ಹೊಂದುವುದಿಲ್ಲ. ಏಕೆಂದರೆ ಇದರಿಂದ ಮೂಲಭೂತ ಹಕ್ಕುಗಳ ಬಗ್ಗೆ ಇರುವ ಖಾತರಿ ಮತ್ತು ನ್ಯಾಯಾಂಗದ ಸ್ವಾತಂತ್ರ್ಯಕ್ಕೆ ಯಾವುದೇ ಧಕ್ಕೆ ಬರುವುದಿಲ್ಲ.

ಈ ವಿಷಯದಲ್ಲಿ ಸಮಾನಮನಸ್ಕರಾಗಿರುವವರು ಮಾಡಬಹುದಾದ ಕೆಲಸವೇನೆಂದರೆ, ಈಗಿನ ವ್ಯವಸ್ಥೆಯನ್ನು ಬದಲಾಯಿಸಿ ಅಧ್ಯಕ್ಷೀಯ ಪ್ರಜಾಪ್ರಭುತ್ವದ ರೀತಿಯನ್ನು

ಅಳವಡಿಸಿಕೊಳ್ಳಬೇಕೆಂದು ಪ್ರಮುಖ ರಾಜಕೀಯ ಪಕ್ಷಗಳ ಮೇಲೆ ಒತ್ತಡ ತರಬೇಕು. ಆದರೆ ಒಂದು ವಿಷಯವನ್ನು ಗಮನದಲ್ಲಿಟ್ಟುಕೊಳ್ಳಬೇಕು. ಈ ರೀತಿಯ ಪ್ರಯತ್ನ ನಡೆದಾಗ, ಸಂಬಂಧಪಟ್ಟ ರಾಜಕಾರಣಿಗಳು ಇದನ್ನು ತೀವ್ರವಾಗಿ ವಿರೋಧಿಸಬಹುದು. ಅದಕ್ಕೆ ಕಾರಣವೇನೆಂದರೆ, ಆ ರೀತಿ ಬದಲಾವಣೆ ಮಾಡಿದಾಗ ಈಗ ಅವರು ಅನುಭವಿಸುತ್ತಿರುವ ಫಲಭರಿತ ಮಂತ್ರಿಸ್ಥಾನಗಳು, ಇತರ ಲಾಭದಾಯಕ ಹುದ್ದೆಗಳ ಸುಖ, ಸೌಲಭ್ಯ, ಪ್ರತಿಷ್ಠೆ , ಅಹಂಕಾರ; ದರ್ಪ, ಜಂಭಗಳಿಗೆ ಸಂಚಕಾರ ಬರುತ್ತದೆ. ಹೊಸವ್ಯವಸ್ಥೆಯಿಂದ ಈಗಿರುವ ವ್ಯವಸ್ಥೆಯಲ್ಲಿನ ಪಕ್ಷಾಂತರ ಮಾಡುವ ಪ್ರವೃತ್ತಿ, ಪಕ್ಷದಿಂದ ಪಕ್ಷಕ್ಕೆ ಹಾರುವ ಆಟ ಇವುಗಳೆಲ್ಲವೂ ಕೊನೆಗಾಣುತ್ತವೆ. ಈ ಕಾರಣಗಳಿಂದಾಗಿ ಈ ಬದಲಾವಣೆಗೆ ಒತ್ತಡ ಬರಬೇಕಾದದ್ದು ವಿವೇಚನಾಯುಕ್ತರಾದ, ಸರಿಯಾದ ದಾರಿಯಲ್ಲಿ ನಡೆಯಬಲ್ಲ ವ್ಯವಸ್ಥೆಯಲ್ಲಿ ಯಾವುದೇ ವೈಯಕ್ತಿಕ ಕೌಟುಂಬಿಕ, ಹಿತಾಸಕ್ತಿ ಪ್ರಲೋಭನೆಗಳನ್ನು ಹೊಂದದೆ ಇರುವ ದೇಶಪ್ರೇಮಿ ಪ್ರಜಾಪ್ರಭುತ್ವ ಪ್ರೇಮೀ ಭಾರತೀಯರಿಂದ.

ಈ ಬದಲಾವಣೆಯನ್ನು ತರಲು, ಸಮಾಜದ ಎಲ್ಲಾ ಸ್ತರಗಳ ಜನಗಳಿಗೂ, ಸರಿಯಾದ ಪ್ರಜಾಪ್ರಭುತ್ವ ವ್ಯವಸ್ಥೆ ಅದರಲ್ಲೂ ಅತ್ಯವಶ್ಯಕವಾದ ಅಡೆತಡೆಗಳನ್ನೂ ವಿಧಿ-ನಿಷೇಧಗಳನ್ನೂ ಹೊಂದಿರುವಂತಹ ವ್ಯವಸ್ಥೆ, ದೇಶದ ಹಿತಾಸಕ್ತಿಯ ದೃಷ್ಟಿಯಿಂದ ಅತ್ಯವಶ್ಯಕ ಎಂದು ಮನವರಿಕೆ ಮಾಡಿಕೊಡಲು ಪ್ರಬಲವಾದ ಮತ್ತು ಬೃಹತ್ಪ್ರಮಾಣದ ಜನ ಜಾಗೃತಿಯ ಚಳುವಳಿ ಅತ್ಯವಶ್ಯಕ. ನೈಜವಾದ ಅಧ್ಯಕ್ಷೀಯ ವ್ಯವಸ್ಥೆಯನ್ನು ಜಾರಿಗೆ ತರುವುದನ್ನೇ ಏಕೈಕ ಗುರಿಯನ್ನಾಗಿ ಹೊಂದಿರುವಂತಹ ರಾಜಕೀಯ ಪಕ್ಷವೊಂದು ಸಂಘಟಿತವಾದರೆ, ಅದೇ ಅದರ ಘೋಷವಾಕ್ಯ ಮತ್ತು ಪ್ರಣಾಳಿಕೆಯಾದರೆ, ಸ್ವಲ್ಪ ಕಾಲದ ನಂತರ ಅಂತಹ ಬದಲಾವಣೆಯನ್ನು ತರಲು ಸಾಧ್ಯವಾಗಬಹುದು. 1951ರ ಜನಪ್ರಾತಿನಿಧ್ಯ ಕಾನೂನಿನ ವಿಧಿ 29ಎ ಅಡಿಯಲ್ಲಿ ನೋಂದಣಿಯಾದ ರಾಜಕೀಯ ಪಕ್ಷಕ್ಕೆ ವ್ಯಕ್ತಿಗಳಿಂದ ಮತ್ತು ಕಂಪನಿಗಳಿಂದ ಕೊಡಲ್ಪಡುವ ದೇಣಿಗೆಗಳು ಕ್ರಮವಾಗಿ ಆದಾಯ ತೆರಿಗೆ ಕಾನೂನಿನ 80 ಜಿಜಿಸಿ ವಿಧಿ ಮತ್ತು 80 ಜಿಜಿಬಿ ವಿಧಿಗಳ ಅನ್ವಯ ವಿನಾಯಿತಿಗೆ ಅರ್ಹತೆ ಹೊಂದುತ್ತವೆ. ಇದರಿಂದ ರಾಷ್ಟ್ರಾದ್ಯಂತ ನಡೆಸಬೇಕಾದ ಚಳುವಳಿಗೆ ಹಣ ಸಂಗ್ರಹ ಮಾಡಬಹುದು.

**71 ಪುಟಗಳ– ಅಧ್ಯಕ್ಷೀಯ ಪ್ರಜಾಪ್ರಬುತ್ವ ಇಂದಿನ ಅವಶ್ಯಕತೆ (ಪ್ರೆಸಿಡೆನ್ಷಿಯಲ್ ಡೆಮೋಕ್ರಸಿ– ದಿ ನೀಡ್ ಆಫ್ ದಿ ಅವರ್ ಕೃತಿ — ವೆಬ್‌ಸೈಟನಿಂದ ಡೌನ್‌ಲೋಡ್ ಮಾಡಿಕೊಳ್ಳಲು ದೊರೆಯುತ್ತದೆ.**



## 2500 ವರ್ಷಗಳ ಹಿಂದೆ ಬುದ್ಧ ಹೇಳಿದ್ದೇನು?

ಪ್ರಭುತ್ವದ ಪ್ರಮುಖ ಮಂತ್ರಿಯೊಬ್ಬ ತನ್ನ ಕಾರ್ಯಗಳನ್ನು ನಿರ್ಲಕ್ಷಿಸಿ ತನ್ನದೇ ಹಿತಕಾಪಾಡಿಕೊಳ್ಳಲು ಕೆಲಸ ಮಾಡಿದರೆ, ಅಥವಾ ಲಂಚವನ್ನು ಸ್ವೀಕರಿಸಿದರೆ, ಅದರಿಂದ ಜನತೆಯಲ್ಲಿನ ನೈತಿಕತೆ ತ್ವರಿತಗತಿಯಲ್ಲಿ ಇಳಿದು ಹೋಗುತ್ತದೆ. ಅವರು ಒಬ್ಬರನ್ನೊಬ್ಬರು ಮೋಸಗೊಳಿಸುತ್ತಾರೆ. ಬಲಶಾಲಿಗಳು, ದುರ್ಬಲರ ಮೇಲೆ ಆಕ್ರಮಣ ಮಾಡುತ್ತಾರೆ. ಕುಲೀನರು, ಉತ್ತಮರು, ಜನಸಾಮನ್ಯರನ್ನು ಕೀಳಾಗಿ ನಡೆಸಿಕೊಳ್ಳುತ್ತಾರೆ. ಶ್ರೀಮಂತರು ಬಡವರ ದುರುಪಯೋಗ ಮಾಡಿಕೊಳ್ಳುತ್ತಾರೆ. ಯಾರಿಗೂ ನ್ಯಾಯ ದೊರೆಯದೆ ಹೋಗುತ್ತದೆ. ಅಕಾರ್ಯಗಳು ಹೆಚ್ಚುತ್ತವೆ. ಎಲ್ಲೆಲ್ಲೂ ತೊಂದರೆ, ಆತಂಕ, ಅಡ್ಡಿಗಳು ಕಾಣಿಸಿಕೊಳ್ಳುತ್ತವೆ.

ಅಂತಹ ಸಂಧರ್ಭದಲ್ಲಿ ನಿಷ್ಠಾವಂತ ಮಂತ್ರಿಗಳು ಸಾರ್ವಜನಿಕ ಕ್ಷೇತ್ರದಿಂದ ಹಿಂದೆ ಸರಿಯುತ್ತಾರೆ. ವಿವೇಚನಾಯುಕ್ತರು, ಬರಬಹುದಾದ ತೊಂದರೆ ತಾಪತ್ರಯಗಳಿಗೆ ಹೆದರಿ ಮೌನಿಗಳಾಗುತ್ತಾರೆ. ಸರ್ಕಾರದ ಅಧಿಕಾರ ಸ್ಥಾನಗಳು ಹೊಗಳು ಭಟ್ಟರಿಂದ ತುಂಬಿ ಹೋಗುತ್ತವೆ. ಅವರು ತಮ್ಮ ರಾಜಕೀಯ ಅಧಿಕಾರವನ್ನು ತಮ್ಮ ಸ್ವಂತ ಲಾಭಕ್ಕೆ ಬಳಸಿಕೊಳ್ಳುತ್ತಾರೆ. ಅವರಿಗೆ ಜನಸಾಮಾನ್ಯರ ನೋವು, ಸಂಕಟಗಳ ಪರಿವೆಯೇ ಇರುವುದಿಲ್ಲ.

ಅಂತಹ ಪರಿಸ್ಥಿತಿಯಲ್ಲಿ ಸರ್ಕಾರದ ಅಧಿಕಾರ ವೈಫಲ್ಯ ಹೊಂದುತ್ತದೆ. ನ್ಯಾಯನೀತಿಗಳ ಯೋಜನೆಗಳು ವಿನಾಶ ಹೊಂದುತ್ತವೆ.

ಅಂತಹ ನ್ಯಾಯರಹಿತ ಅಧಿಕಾರವರ್ಗ ಜನರ ಸುಖಸಂತೋಷಗಳನ್ನು ಕದಿಯುವವರಾಗುತ್ತಾರೆ. ಕಳ್ಳರಿಗಿಂತ ಹೀನರಾಗುತ್ತಾರೆ. ಏಕೆಂದರೆ ಅವರು ರಾಜನನ್ನು ಜನಸಾಮಾನ್ಯರನ್ನು, ಇಬ್ಬರನ್ನೂ ವಂಚಿಸುತ್ತಾರೆ. ಅವರೇ ದೇಶದ ತೊಂದರೆಗಳಿಗೆ ಮೂಲಕಾರಣರಾಗುತ್ತಾರೆ. ರಾಜ ಅಂತಹ ಮಂತ್ರಿಗಳನ್ನು ಬುಡಸಹಿತ ಕಿತ್ತುಹಾಕಿ ಅವರಿಗೆ ಶಿಕ್ಷೆ ನೀಡಬೇಕು.

ಬುದ್ದನ ಉಪದೇಶಗಳು " ಬುಕ್ಯೊ ದೇಂಡೋ ಕ್ಯೊ ಕಾಯ್" ನಿಂದ ಉದ್ಧೃತವಾದದ್ದು.

ಬುದ್ಧನ ಉಪದೇಶಗಳು ಬುದ್ದನ ನಿರ್ವಾಣದ ನಂತರದ ಹಲವಾರು ಶತಮಾನಗಳ ಕಾಲ ಭಾರತದ ಜನತೆಯ ಮೇಲೆ ಪ್ರಭಾವ ಬೀರಿತ್ತು. ಅದು ನಮ್ಮ ಹಿಂದಿನ ಆಡಳಿತ ಮಾಡಿದ ರಾಜರ ಮೇಲೂ ತನ್ನ ಪ್ರಭಾವವನ್ನು ಬೀರಿತ್ತು. ಆ ಸಮಯ ಭಾರತದ ಸುವರ್ಣ ಯುಗವಾಗಿದ್ದುದರಲ್ಲಿ ಆಶ್ಚರ್ಯವೇನಿದೆ.

ಒಂದು ಸರಿಯಾದ ಅಧ್ಯಕ್ಷೀಯ ವ್ಯವಸ್ಥೆಯ ಪ್ರಜಾಪ್ರಭುತ್ವದಲ್ಲಿ, ಅಂತಹ ವ್ಯವಸ್ಥೆಯಲ್ಲಿ ಮಂತ್ರಿಮಂಡಳದ ಸದಸ್ಯರನ್ನು ಅವರ ಹಿನ್ನೆಲೆ ಮತ್ತು ಸಾಬೀತಾದ ಅವರ ಸಾಮರ್ಥ್ಯದ ಆಧಾರದ ಮೇಲೆ ಆರಿಸುವುದರಿಂದ ಭಾರತ ಮತ್ತೆ ತನ್ನ ಸುವರ್ಣಯುಗವನ್ನು ಕಾಣುವ ಸಾಧ್ಯತೆಗಳಿವೆ.

ದಿ ಫೋರಂ ಫಾರ್ ಪ್ರೆಸಿಡೆನ್ಸಿಯಲ್ ಡೆಮೋಕ್ರಸಿ ಒಂದು ರಾಜಕೀಯ ಪಕ್ಷ. ಇದು **1951** ರ ಜನಪ್ರಾತಿನಿಧ್ಯ ಕಾನೂನಿನ ವಿದಿ **292** ಅಡಿಯಲ್ಲಿ ನೋಂದಾವಣೆಯಾಗಿದೆ. ಇದು ಈಗಿರುವ ಅಸಮರ್ಥ, ಲಂಚ, ಖುಷುವತ್ತುಗಳಿಂದ ಕೂಡಿದ ತುಂಬಾ ಅಸ್ಥಿರವಾದ ವ್ಯವಸ್ಥೆಯನ್ನು ಬದಲಾಯಿಸಿ ಉತ್ತಮವಾದ, ಸ್ಥಿರವಾದ, ಇನ್ನೂ ಹೆಚ್ಚು ಪ್ರಜಾಸತ್ತಾತ್ಮಕವಾದ ಅಧ್ಯಕ್ಷೀಯ ಪ್ರಜಾಪ್ರಭುತ್ವವನ್ನು ತರಲು ಜನಜಾಗೃತಿ ಮೂಡಿಸುವ ಉದ್ದೇಶವನ್ನು ಹೊಂದಿದೆ. ಈ ದಿಶೆಯಲ್ಲಿ ಭಾರತದಲ್ಲಿ ಈಗಿರುವ ಪರಿಸ್ಥಿತಿಗೆ,ಸರಿಯಾದ ಅಡೆತಡೆಗಳು, ಇತಿಮಿತಿಗಳನ್ನು ಹೊಂದಿರುವ ಅಧ್ಯಕ್ಷೀಯ ಪ್ರಜಾಪ್ರಭುತ್ವದ ವಿಷಯದಲ್ಲಿ ಜನಜಾಗೃತಿಯನ್ನು ಮೂಡಿಸಲು ಒಂದು ಜನಜಾಗೃತಿ ಅಭಿಯಾನವನ್ನು ಕೈಗೊಳ್ಳುವ ಪ್ರಯತ್ನ ಮಾಡುತ್ತಿದೆ. ಈಗಿನ ರಾಜಕೀಯ ವ್ಯವಸ್ಥೆಯ ಬಗ್ಗೆ ನಮ್ಮ ದೇಶದ ಬಹುಮಟ್ಟಿನ ಜನತೆ ನಿರಾಶೆ ಹೊಂದಿ ಜಿಗುಪ್ಸೆ ತಾಳಿದೆ. ಅವರ ಈ ಭ್ರಮನಿರಸನ, ನಿರಾಶಾಭಾವನೆ ಹೆಚ್ಚುತ್ತಲೇ ಹೋಗುತ್ತಿದೆ. ಆದರೆ ಬಹುಮಂದಿಗೆ ಇಂದಿನ ಈ ದುರ್ಭರಸ್ಥಿತಿಯಿಂದ ಹೊರಗೆ ಬರಲು ಯಾವುದೇ ಸಮರ್ಪಕ ದಾರಿ ಕಾಣುತ್ತಿಲ್ಲ.

ಇಂದಿನ ಈ ವಿಷಮ ಪರಿಸ್ಥಿತಿಯಲ್ಲಿ ತುಂಬಾ ಅವಶ್ಯಕವಾಗಿರುವ ಅಧ್ಯಕ್ಷೀಯ ಪ್ರಜಾಪ್ರಭುತ್ವವನ್ನು ತಕ್ಕ ಮತ್ತು ಅವಶ್ಯಕವಾದ ಮಾರ್ಪಾಟುಗಳೊಂದಿಗೆ ತರಲು ಬೇಕಾದ ಮಾರ್ಗದರ್ಶಿ ದೀಪವನ್ನು ತೋರಿಸಲು ಈ ಫೋರಂ ಮುಂದಾಗಿದೆ.

## ಒಂದು ಮನವಿ.

ಈ ಫೋರಂ ಕೈಗೊಂಡಿರುವ ರಾಷ್ಟ್ರೀಯ ಉದ್ದೇಶಕ್ಕೆ ಭಾರತದ ಹಿತದೃಷ್ಟಿಯಿಂದ ಭಾರತದಲ್ಲಿ ಅಧ್ಯಕ್ಷೀಯ ಪ್ರಜಾಪ್ರಭುತ್ವವನ್ನು ತರುವುದಕ್ಕೆ ಅದಕ್ಕೆ ಸದಸ್ಯರಾಗುವುದರ ಮೂಲಕ ಮತ್ತು ಅದಕ್ಕೆ ದೇಣಿಗೆ ನೀಡುವುದರ ಮೂಲಕ ತಮ್ಮ ಬೆಂಬಲವನ್ನು ನೀಡಬೇಕೆಂದು ಪಕ್ಷ ದೇಶದ ಎಲ್ಲಾ ಪ್ರಜ್ಞಾವಂತ ನಾಗರಿಕರನ್ನು ಕೋರುತ್ತದೆ.

**1951**ರ ಜನಪ್ರಾತಿನಿಧ್ಯ ಕಾನೂನಿನ ವಿದಿ **29**ಎ ಅಡಿಯಲ್ಲಿ ನೋಂದಾಯಿತರಾಗಿರುವ ರಾಜಕೀಯ ಪಕ್ಷಕ್ಕೆ ನೀಡುವ ಎಲ್ಲಾ ವ್ಯಕ್ತಿಗತ ಮತ್ತು ಸಂಸ್ಥಾಗತ ದೇಣಿಗೆಗಳೂ ಆದಾಯ ತೆರಿಗೆ ಕಾನೂನಿನ ವಿಧಿ **80** ಜಿ.ಜಿ.ಸಿ ಮತ್ತು **80** ಜಿ.ಜಿ.ಡಿಗಳ ಅಡಿಯಲ್ಲಿ ವಿನಾಯಿತಿಗೆ ಅರ್ಹವಾಗುತ್ತವೆ.